# ವಚನ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆಗಳು

**ಅನುಷ**

ಕಲಾ ವಿದ್ಯಾರ್ಥಿ, ವಿಜಯ ಕಾಲೇಜು, ಜಯನಗರ, ಬೆಂಗಳೂರು.

DOI: https://doi.org/10.5281/zenodo.15490928

## ABSTRACT:

ಪ್ರಸ್ತುತ ಲೇಖನದಲ್ಲಿ ಹನ್ನೆರಡನೇಯ ಶತಮಾನದಲ್ಲಿದ್ದ ವಚನ ಸಾಹಿತ್ಯದ ಸಾಮಾಜಿಕ ಚಿಂತನೆಗಳು ವ್ಯಕ್ತವಾಗಿವೆ. ಆ ಕಾಲದಲ್ಲಿದ್ದ ಸಾಮಾಜಿಕ ಮೌಲ್ಯ ಪರಿವರ್ತನೆ ವಚನಕಾರರು ಸಮಾನ ನಾಯಕತ್ವವನ್ನು ಅನುಸರಿಸಿದ್ದು, ಜಾತಿ – ಧರ್ಮ, ಲಿಂಗ ತಾರತಮ್ಯ, ಮೇಲು – ಕೀಳು, ವಿಗ್ರಹಾರಾಧನೆ ದೇವಸ್ಥಾನಗಳ ನಿರ್ಮಾಣವನ್ನು ಖಂಡಿಸಿದರು ಹಾಗೂ ಇದಕ್ಕೆಲ್ಲ ವಿರೋಧಿಯಾಗಿದ್ದರು. ವೀರಶೈವ ಧರ್ಮದ ಪಂಚ ಸೂತ್ರಗಳು ಕಾಯಕದ ಮಹತ್ವವನ್ನು ತಿಳಿಸಿರುವುದು ಎಲ್ಲರಲ್ಲಿಯೂ ಸಮಾನತೆಯ ಭಾವ ಅಂದಿನ ಕಾಲಕ್ಕೆ ಹೇಗಿತ್ತು. ವಚನಕಾರರಾದ ಬಸವಣ್ಣನವರು ಮತ್ತು ಅಕ್ಕಮಹಾದೇವಿಯವರ ವಚನಗಳ ಗ್ರಹಿಕೆ, ವಚನ ಸಾಹಿತ್ಯ ಇಂದಿನ ಸಮಾಜಕ್ಕೆ ಏಕೆ ಪ್ರಸ್ತುತ ಹಾಗೂ ಸಣ್ಣದೊಂದು ಪದ್ಯವನ್ನು ವಿಷಯದ ಕುರಿತು ಒಳಗೊಂಡಿದೆ.

## KEYWORDS:

ಜೀವನದ ಅನುಭವಗಳು, ಸಮಾನ ನಾಯಕತ್ವ, ಜಾತಿವ್ಯವಸ್ಥೆ, ಕಾಯಕ ತತ್ವ, ಸಾಮಾಜಿಕ ಮೌಲ್ಯಗಳು.

ಪ್ರಸ್ತುತ ಲೇಖನದಲ್ಲಿ ಹನ್ನೆರಡನೇಯ ಶತಮಾನದಲ್ಲಿದ್ದ ವಚನ ಸಾಹಿತ್ಯದ ಸಾಮಾಜಿಕ ಚಿಂತನೆಗಳು ವ್ಯಕ್ತವಾಗಿವೆ. ಆ ಕಾಲದಲ್ಲಿದ ಸಮಾಜಿಕ ಮೌಲ್ಯ ಪರಿವರ್ತನೆ. ವಚನಕಾರರು ಸಮಾನ ನಾಯಕತ್ವವನ್ನು ಅನುಸರಿಸಿದ್ದು, ಜಾತಿ – ಧರ್ಮ, ಲಿಂಗ ತಾರತಮ್ಯ, ಮೇಲು – ಕೀಳು, ವಿಗ್ರಹಾರಾಧನೆ ದೇವಸ್ಥಾನಗಳ ನಿರ್ಮಾಣವನ್ನು ಖಂಡಿಸಿದರು ಹಾಗೂ ಇದಕ್ಕೆಲ್ಲ ವಿರೋಧಿಯಾಗಿದ್ದರು. ವೀರಶೈವ ಧರ್ಮದ ಪಂಚ ಸೂತ್ರಗಳು ಕಾಯಕದ ಮಹತ್ವವನ್ನು ತಿಳಿಸಿರುವುದು ಎಲ್ಲರಲ್ಲಿಯೂ ಸಮಾನತೆಯ ಭಾವ ಅಂದಿನ ಕಾಲಕ್ಕೆ ಹೇಗಿತ್ತು. ವಚನಕಾರರಾದ ಬಸವಣ್ಣನವರು ಮತ್ತು ಅಕ್ಕಮಹಾದೇವಿಯವರ ವಚನಗಳ ಗ್ರಹಿಕೆ, ವಚನ ಸಾಹಿತ್ಯ ಇಂದಿನ ಸಮಾಜಕ್ಕೆ ಏಕೆ ಪ್ರಸ್ತುತ ಹಾಗೂ ಸಣ್ಣದೊಂದು ಪದ್ಯವನ್ನು ವಿಷಯದ ಕುರಿತು ಒಳಗೊಂಡಿದೆ.

ವಚನ ಸಾಹಿತ್ಯವು 12ನೇ ಶತಮಾನದ ಸಮಾಜದ ಪರಿವರ್ತನೆಯ ಮಹತ್ವದ ಸಾಧನವಾಗಿತ್ತು. 12 ರಿಂದ 15ನೇ ಶತಮಾನದವರೆಗೆ ಈ ಯುಗದ ಹರಿವಿದ್ದೆ. ವಚನ ಸಾಹಿತ್ಯ ಶರಣರ ಸಮಾಜಿಕ ಚಿಂತನೆಗಳನ್ನು ಪ್ರತಿಬಿಂಬಿಸುತ್ತದೆ. ಇದರ ಮೂಲ

ಕರ್ತೃ 'ಬಸವಣ್ಣ' ಆನಂತರ ಅಕ್ಕಮಹಾದೇವಿ, ಅಲ್ಲಮ ಪ್ರಭು, ಸೊನ್ನಲಿಗೆಯ ಸಿದ್ದರಾಮ, ಉರಿಲಿಂಗಪೆದ್ದಿ ಸೇರಿ ಇನ್ನೂ ಅನೇಕ ಶರಣರು ತಮ್ಮ ವಚನಗಳಲ್ಲಿ ಸಮಾಜದ ಪರಿವರ್ತನೆಗೆ ಸಂಬಂಧಿಸಿದ ಹಲವಾರು ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ. ಪ್ರಮುಖವಾಗಿ ಜಾತ್ಯತೀತ ಶ್ರಮಧಾರಿತ ನೈತಿಕತೆ ಹಾಗೂ ಸಮಾನತೆಯ ಸಿದ್ಧಾಂತಗಳನ್ನು ಉತ್ತೇಜಿಸಿದ್ದಾರೆ.

ಈ ಸಾಹಿತ್ಯವು ಭಕ್ತಿ ಮತ್ತು ಪ್ರಜಾಸತಾತ್ಮಕ ತತ್ವಗಳಿಗೆ ಸ್ಪೂರ್ತಿಯಾಗಿದೆ ಸಾಹಿತ್ಯದ ದೃಷ್ಟಿಕೋನವನ್ನು ಹೊರತುಪಡಿಸಿ ವಚನಕಾರರು ಜೀವನದ ಅನುಭವಗಳನ್ನೇ ವಚನಗಳನ್ನಾಗಿ ರಚಿಸಿದ್ದಾರೆ.

ಅವರಲ್ಲಿ ನಾಯಕ ಮತ್ತು ಹಿಂಬಾಲಕನ ತಾರತಮ್ಯವಿರಲಿಲ್ಲ ಅವರು ಏಕ ನಾಯಕತ್ವದಲ್ಲಿನ ನಂಬಿಕೆಯನ್ನು ತೊರೆದು ಸಮಾನ ನಾಯಕತ್ವವನ್ನು ಆಧರಿಸಿದರು. ಬದುಕಿನ ಬಗ್ಗೆ ಅವರಿಗೆ ಯಾವ ಆಸೆ ಆಕಾಂಕ್ಷೆಗಳು ಇರಲಿಲ್ಲ ಎಲ್ಲದರಿಂದ ಮುಕ್ತಿ ಹೊಂದಲು ಶೂನ್ಯ ಸಂಪಾದನೆ ಎತ್ತ ಸಾಗಿದರು. ವಚನಕಾರರು (ಶರಣರು) ಯಜ್ಞ ಯಗಾದಿಗಳನ್ನು ಖಂಡಿಸುತ್ತಿದ್ದರೂ ವಿಗ್ರಹಾರಾಧನೆ ಮತ್ತು ದೇವಾಲಯ ನಿರ್ಮಾಣ ಅದರಲ್ಲಿ ಯಾರೋ ಪ್ರತಿಷ್ಠಾಪನೆ ಮಾಡಿದ ಮೂರ್ತಿಯನ್ನು ಪೂಜಿಸುವುದನ್ನು ವಿರೋಧಿಸುತ್ತಾ ವಿಗ್ರಹಕ್ಕೆ ಪೂಜಿಸುವುದರ ಬದಲು ತಮಗಿಂತ ಮುಂಚೆ ಪ್ರಚಲಿತವಿದ್ದ ದೇಹದ ಮೇಲೆ ಲಿಂಗ ಧರಿಸುವ ಪದ್ಧತಿಯನ್ನು ಸಮರ್ಥಿಸುತ್ತಿದ್ದರು. ಹಾಗೂ ವರ್ಣ, ಜಾತಿ ವ್ಯವಸ್ಥೆ, ಸ್ತ್ರೀ - ಪುರುಷ ಬೇಧ, ಸೂತಕಾಚರಣೆ, ಆಸ್ತಿ ಬಡ್ಡಿ ವ್ಯವಹಾರಗಳಿಗೆ ವಿರೋಧಿಗಳಾಗಿದ್ದರು.

ಅಂದಿನ ಕಾಲದಲ್ಲಿ ವೃತ್ತಿಗಳೇ ಜಾತಿಗಳ ಬೀಜವಾಗಿದ್ದವು. ತಮ್ಮ ಇಂದಿನ ತಲೆಮಾರಿ ನವರಿಂದ ಬಂದ ಕಸುಬೇ ಸುಲಭವಾದ್ದಾರಿಂದ ಜನರು ಬೇರೆ ಕಸುಬನ್ನು ಅವಲಂಬಿಸಲು ಪ್ರಯತ್ನಿಸಲಿಲ್ಲ. ಈ ಸತ್ಯ ಗೋಚರಿಸಿದ್ದು ' ವಿಶ್ವಗುರು ಬಸವಣ್ಣ' ನವರಿಗೆ, ಹೀಗಾಗಿ ಅವರು:

**ಕಾಸಿ ಕಮ್ಮಾರನಾದ, ಬಿಸಿ ಮಡಿವಾಳನಾದ**
**ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರವನಾದ**
**ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?**
**ಇದು ಕಾರಣ ಕೂಡಲಸಂಗಮದೇವಾ,**
**ಲಿಂಗಸ್ಥವನ್ನರಿದವನೇ ಕುಲಜನು.**

ಎನ್ನುವ ಪ್ರಸ್ತುತ ವಚನವನ್ನು ರಚಿಸಿದ್ದರು. ಜನರ ನಡುವಿದ್ದ ಜಾತಿ ಗೋಡೆಗಳನ್ನು ಶರಣರು ಕೆಡವಲು ಯತ್ನಿಸಿದರು ವಿವಿಧ ಮೂಲಗಳಿಂದ ವೀರಶೈವ ಧರ್ಮಕ್ಕೆ ಬಂದ ಜನರಲ್ಲಿ ಒಗ್ಗಟ್ಟನ್ನು ಮೂಡಿಸುವ ಉದ್ದೇಶದಿಂದಾಗಿ – ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ ವೆಂಬ ಪಂಚಾಚಾರಗಳ

ಕಟ್ಟಾಳೆಯನ್ನು ಶರಣರು ಜನರಿಗೆ ವಿಧಿಸಿದರು. ಇವು ವೀರಶೈವನೊಬ್ಬನ ನಡತೆಯನ್ನು ನಿಯಂತ್ರಿಸುವ ನಿರ್ದೇಶಿಸುವ ಪ್ರಪಂಚಸೂತ್ರಗಳಾದವು.

**ಕಾಯಕ ತತ್ವ:**

ಕಾಯಕವೇ ಕೈಲಾಸ ಎಂದು ಕಾಯಕದ ಮಹತ್ವವನ್ನು ಬಸವಣ್ಣನವರು ಸಮಾಜಕ್ಕೆ ತಿಳಿಸಿದರು. ಕಾಯಕದ ತತ್ವವು ಶ್ರಮ ಜೀವನವನ್ನು ಪ್ರತಿಪಾದಿಸುತ್ತದೆ ಪ್ರತಿಯೊಬ್ಬರೂ ತಮ್ಮ ವೃತ್ತಿಯನ್ನು ಶ್ರದ್ಧೆಯಿಂದ ಪ್ರಾಮಾಣಿಕತೆಯಿಂದ ನಡೆಸಬೇಕೆಂದು ಶರಣರು ಕಾಯಕವೇ ಕೈಲಾಸ ಎಂದು ನುಡಿದಿದ್ದಾರೆ. ದುಡಿಯುವುದು, ದುಡಿಮೆಗೆ ತಕ್ಕ ಗಳಿಕೆ, ಬದುಕಿಗೆ ಬೇಕಾದುದ್ದಕ್ಕಿಂತ ಹೆಚ್ಚಿನದ್ದನ್ನು ವಿನಿಯೋಗಿಸುವುದು. ಶ್ರಮದಿಂದಗಳಿಸಿದ್ದನ್ನು ಅನ್ನದಾಸೋಹಕ್ಕೆ ವಿನಿಯೋಗಿಸುವುದು ಕಾಯಕದ ಮೌಲ್ಯವನ್ನು ತಿಳಿಸಿತ್ತದೆ.

**ಸಮಾನತೆಯ ಭಾವ:**

ವಚಕಾರರು ಸಮಾಜದಲ್ಲಿ ಪ್ರಚಲಿತವಿದ್ದ ಅನೇಕ ಕಟ್ಟುಪಾಡುಗಳನ್ನು ನೀತಿ ನಿಯಮಗಳನ್ನು ಧಿಕ್ಕರಿಸುತ್ತಾರೆ. ಮೂಡನಂಬಿಕೆಗಳನ್ನು ಬಲವಾಗಿ ನಂಬಿದ ತಿಳಿಗೇಡಿಗಳಿಗೆ ತಿಳಿಹೇಳುತ್ತಾರೆ. ಉಳ್ಳವರ ದಬ್ಬಾಳಿಕೆಗೆ ಗುರಿಯಾಗುತ್ತಿರುವ ಶೋಷಿತರನ್ನು ಬಂಧನದಿಂದ ಮುಕ್ತಗೊಳಿಸುವರು. ಹಲವಾರು ಅಂತರ್ಜಾತಿ ವಿವಾಹಕ್ಕೆ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದರು ಯಾವುದೇ ಜಾತಿ ಧರ್ಮದ ಭೇದ ಭಾವವಿಲ್ಲದೆ, ಸಮಾಜದಲ್ಲಿ ಎಲ್ಲರೂ ಸಮಾನರು ಜಗತ್ತಿನಲ್ಲಿ ಇರುವುದು ಒಂದೇ ಧರ್ಮ ಅದು ಮಾನವ ಧರ್ಮ ಎಂದು ಸಾರಿದರು.

**1) ಬಸವಣ್ಣ:**

ವಿಶ್ವಗುರು, ಭಕ್ತಿ ಭಂಡಾರಿ ಹೀಗೆ ಮುಂತಾದ ನಾಮಗಳಿಂದ ಪ್ರಸಿದ್ಧರಾದವರು. ಬಸವಣ್ಣನವರ ವಚನಗಳು ಜನರಲ್ಲಿ ಆತ್ಮಸ್ಥೈರ್ಯವನ್ನು ತುಂಬುತ್ತದೆ. ಅವರ ವಚನಗಳಲ್ಲಿ ಇರುವಷ್ಟು ಆತ್ಮ ವಿಮರ್ಶೆಯನ್ನು ಮತ್ತೊಬ್ಬ ವಚನಕಾರರಲ್ಲಿ ಕಾಣಲಾರೆವು. ಇವರು ಭಕ್ತರೊಂದಿಗೆ ಸ್ನೇಹ ಸಲುಗೆಯಿಂದಿದ್ದ ಮಹಾನ್ ಸಾಧುಗಳು ಎಂದರು ತಪ್ಪಾಗುವುದಿಲ್ಲ. ಮೃದು ಸ್ವಭಾವದವರು.

**ಕಾಗೆಯೊಂದಗುಳ ಕಂಡರೆ**
**ಕರೆಯದೇ ತನ್ನ ಬಳಗವೆಲ್ಲವ?**
**ಕೋಳಿಯೊಂದು ಕುಟುಕ ಕಂಡರೆ**
**ಕೂಗಿ ಕರೆಯದೆ ತನ್ನ ಕುಲವೆಲ್ಲವ?**
**ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ**
**ಆ ಕಾಗೆ ಕೋಳಿಯಿಂದ ಕರಕಷ್ಟ**

**ಕೂಡಲಸಂಗಮದೇವ.**

ಪ್ರಸ್ತುತ ವಚನವು ಮನುಷ್ಯನಿಗೆ ಕೂಡಿ ಬಾಳುವುದನ್ನು ಹಂಚಿ ತಿನ್ನುವ ಏಕತೆಯನ್ನು ಪ್ರತಿಪಾದಿಸುತ್ತದೆ ಕಾಗೆಯು ಚೆಲ್ಲಿದ ಅಗುಳನ್ನು ಕಂಡ ಕೂಡಲೇ ತನ್ನ ಬಳಗವನ್ನೆಲ್ಲ ಕರೆಯುತ್ತದೆ. ಹಾಗೆಯೇ ಕೋಳಿಯೊಂದು ಒಂದು ಗುಟುಕನ್ನು ಕಂಡ ತಕ್ಷಣ ಕುಲವನ್ನೆಲ್ಲವನ್ನೂ ಕರೆಯುತ್ತದೆ. ತನಗೆ ಸಿಕ್ಕ ಆಹಾರವನ್ನು ಎಲ್ಲರೊಂದಿಗೆ ಹಂಚಿ ತಿನ್ನುತ್ತದೆ. ಆದರೆ ಶಿವ ಭಕ್ತನಾದವನು ಉಳಿದವರೆಲ್ಲ ದೈವ ಭಕ್ತರೆ, ಕುಲಗಳೆಲ್ಲ ಒಂದೇ ಅದೇ ಶಿವನ ಕುಲ. ಭಕ್ತಿ ಪಕ್ಷವನ್ನು ಕಟ್ಟಿಕೊಂಡು ಕೂಡಿ ಬದುಕದಿದ್ದರೆ ಹೇಗೆ? ಸ್ವಾರ್ಥಿಯಾದವನು ಕಾಗೆ ಕೋಳಿಗಿಂತಲೂ ಕನಿಷ್ಠ ಎಂಬುದನ್ನು ಬಸವಣ್ಣನವರು ಈ ವಚನದಲ್ಲಿ ವ್ಯಕ್ತಪಡಿಸಿದ್ದಾರೆ.

## 2) ಅಕ್ಕಮಹಾದೇವಿ:

ಕನ್ನಡ ಸಾಹಿತ್ಯದ ಮೊದಲನೆಯ ಕವಾಯಿತ್ರಿ. ಈಕೆ ಅಲ್ಲಮ್ಮನಿಂದ 'ವೈರಾಗ್ಯನಿಧಿ' ಎಂದು ಕರೆಸಿಕೊಂಡವಳು. ಈಕೆಯ ವಚನಗಳು ಭಕ್ತಿ, ವೈರಾಗ್ಯ, ಜ್ಞಾನ ಸಂಪನ್ನವಾಗಿದ್ದರು ಕಾವ್ಯ ಸೌಂದರ್ಯದಿಂದ ಮೋಹಕವಾಗಿವೆ. ತನ್ನ ಸಂಸಾರಿಕ ಜೀವನವನ್ನು ತೊರೆದು ಚೆನ್ನಮಲ್ಲಿಕಾರ್ಜುನನ್ನೆ ಪತಿ ಎಂದು ನಂಬಿ, ಶ್ರೀಶೈಲದ ಕದಳಿ ಬನದಲ್ಲಿ ಐಕ್ಯಳಾದವಳು.

**ಬೆಟ್ಟದ ಮೇಲೊಂದು ಮನೆಯ ಮಾಡಿ**
**ಮೃಗಗಳಿಗಂಜಿದಡೆಂತಯ್ಯಾ?**
**ಸಮುದ್ರದ ತುದಿಯಲೊಂದು ಮನೆಯ ಮಾಡಿ**
**ನೊರೆತೆರೆಗಳಿಗಂಜಿದಡೆಂತಯ್ಯಾ?**
**ಸಂತೆಯೊಳಗೊಂದು ಮನೆಯ ಮಾಡಿ**
**ಶಬ್ದಕ್ಕೆ ನಾಚಿದಡೆಂತಯ್ಯಾ?**
**ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ**
**ಲೋಕದೊಳಗೆ ಹುಟ್ಟಿದ ಬಳಿಕ ಸುತ್ತಿನಿಂದೆಗಳ ಬಂದಡೆ**
**ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.**
**– ಚೆನ್ನಮಲ್ಲಿಕಾರ್ಜುನ.**

ಮಹಾದೇವಿಅಕ್ಕ ನವರ ಜನಪ್ರಿಯವಾದ ಈ ವಚನವು ಜನತೆಗೆ ವಿಶ್ವ ಸಂದೇಶವನ್ನು ಸಾರುತ್ತದೆ. ಬೆಟ್ಟದ ಮೇಲೆ ಮನೆಯ ಮಾಡಬಾರದು ಮಾಡಿದ ಮೇಲೆ ಕಾಡು ಮೃಗಗಳಿಗೆ ಅಂಜಿದರೆ ಆಗದು, ಹಾಗೆಯೇ ಸಮುದ್ರದ ದಂಡೆಯ ಮೇಲೆ ಮನೆಯನ್ನು ಮಾಡಿ ಎರಗುವ ನೊರೆತೆರೆಗಳಿಗೆ ಅಂಜಬಾರದು. ಜನಸಂದಣಿಯಿಂದ ಕೂಡಿರುವ ಸಂತೆ ಮೈದಾನದ ಬಳಿ ಮನೆ ಮಾಡಿ ಶಬ್ದಕ್ಕೆ ನಾಚಿದರೆ ಆದಿತೆ? ಅದೇ ರೀತಿ ಈ ಲೋಕದಲ್ಲಿ ಹುಟ್ಟಿದ ಬಳಿಕ ಸುತ್ತಿನಿಂದೆ ಸ್ವಾಭಾವಿಕ. ಸುತ್ತಿ ಬಂದಾಗ ಹಿಗ್ಗಬಾರದು ನಿಂದೆ ಬಂದಾಗ ಕುಗ್ಗಬಾರದು.

ಚಿತ್ತಸಮತೆಯನ್ನು ಕಾಯ್ದುಕೊಳ್ಳಬೇಕು ಮನದಲ್ಲಿ ಕೋಪವನ್ನು ತಾಳಬಾರದು ತನುವಿನ ಕೋಪ ಹೊರಗೆ ತೋರಿದರೆ ಮರದ ಬೂದಿ ಮುಚ್ಚಿದ ಕೆಂಡದಂತೆ, ತಿಪ್ಪೆಯೊಳಗಿನ ಬೆಂಕಿಯಂತೆ ಒಳಗೆ ಸುಡುವುದು.

ಈ ವಚನದಲ್ಲಿ ಅಕ್ಕಮಹಾದೇವಿಯು ಈ ಧರೆಯಲ್ಲಿ ಜನ್ಮ ತಾಳಿದ ನಂತರ ಕಷ್ಟ–ನಷ್ಟಗಳು, ನೋವು ಅವಮಾನಗಳನ್ನು ಎದುರಿಸಲೇಬೇಕು. ಅವುಗಳಿಗೆ ಹೆದರಿ ಹಿಮ್ಮೆಟ್ಟುವುದು ಸರಿಯಲ್ಲ ಎಂಬುದನ್ನು ಮಾರ್ಮಿಕವಾಗಿ ತಿಳಿಸುತ್ತಾಳೆ.

ಶರಣರು ಸುಮಾರು ಎಂಟ್ಟುನೂರು ವರ್ಷಗಳ ಹಿಂದೆ ತಮಗೆ ತೋಚಿದ ಮಾರ್ಗದಲ್ಲಿ ಪ್ರಾಮಾಣಿಕತೆಯಿಂದ ನಡೆದರು. ಜಂಗಮವೆಂದರೆ ನಡೆದಾಡುವ ಶಿವನೇ ಎಂಬಷ್ಟು ಭಕ್ತಿಯನ್ನು ಪ್ರಕಟಿಸಿದರು. ಶರಣರ ಮಾತು, ಕ್ರಿಯೆ, ಆಧ್ಯಾತ್ಮಿಕತೆ, ಆಚರಣೆಯ ಆದರ್ಶಗಳು ಸಮಾಜದ ವಿವಿಧ ಸ್ತರಗಳ ಜನರಲ್ಲಿ ಆತ್ಮಸ್ಥೈರ್ಯವನ್ನು ಮೂಡಿಸಿ ಅಂದೊಂದು ಚಳುವಳಿ ನಡೆಯಲು ಸಾಧ್ಯವಾಯಿತು. ಅದೇ "ವಚನ ಚಳುವಳಿ" ಯಾಯಿತು. ವಚನಕಾರರ ವಿರೋಧಕವಾದ ಪ್ರತಿಕ್ರಿಯೆಗಳು, ಸಂಘರ್ಷ ಸಾಮರಸ್ಯಗಳು ಕನ್ನಡ ಸಾಹಿತ್ಯದ ಮೇಲೆ ಆಳವಾದ ವರ್ಚಸ್ಸು ಬೀರಿದ್ದವು. ಶರಣರ ಸಾಹಿತ್ಯದಲ್ಲಿ ಸ್ತ್ರೀಯರ ಸ್ವಾತಂತ್ರವನ್ನು ಉತ್ತೇಜಿಸಲಾಯಿತು.

ತಮ್ಮ ತೆಕ್ಕೆಗೆ ಬಂದವರನ್ನು ಹೊಸ ಚೌಕಟ್ಟಿನೆಡೆಗೆ ಹೊಂದಿಸುವ ಕೆಲಸದಲ್ಲಿ ಶರಣರು ಸಾಕಷ್ಟು ಗಮನವಹಿಸಿದ್ದರು. ಭವಿಗಳ ಬಗ್ಗೆ ಅವರು ಗಮನಹರಿಸಲಿಲ್ಲಾ, ಭಕ್ತರನ್ನು ಸಂಘಟಿಸುವುದೇ ಅವರ ಧ್ಯೇಯವಾಗಿತ್ತು. ಜನರಿಗೆ ಯಾವುದು ಅಸಾಧ್ಯವೋ ಅಂತಹ ಸಾಧನೆಯನ್ನು ಅವರಿಂದ ನಿರೀಕ್ಷಿಸದೇ ಅವರಲ್ಲಿ ಆತ್ಮವಿಶ್ವಾಸ ತುಂಬುವುದು ವಚನಕಾರರು ಕೈಗೊಂಡ ಕಾರ್ಯವಾಗಿತ್ತು.

ಸಮಾಜದಲ್ಲಿ ಸಮಾನತೆಯು ನೆಲೆಗೊಂಡಾಗ ಮಾತ್ರವೇ ಸುಭದ್ರತೆಯೊದಗಳು ಸಾಧ್ಯ ಎಂದು ವಚನಕಾರರು ಬೋಧಿಸಿದ್ದಾರೆ. ಅಂದಿನ ವಚನಕಾರರ ಸಾಮಾಜಿಕ ಮೌಲ್ಯಗಳ ಚಿಂತನೆಗಳು ಇಂದಿಗೂ ಪ್ರಸ್ತುತ ನಾವು ಅನುಸರಿಸಬೇಕಷ್ಟೆ....

**ನಿತ್ಯ ಭಕ್ತಿಯಿಂದ ಪಠಿಸು ಶಿವ ನಾಮವ**
**ಅನ್ಯರಿಗೆ ಆದರ್ಶವಾಗುವಂತಿರಬೇಕು ನಿನ್ನ ನುಡಿ ಮಾನವ**
**ಬಡವರಿಗೆ ಮಾಡದಿರು ಅನ್ಯಾಯವ**
**ಕೊಡುಗೈದಾನಿಯಾಗಿ ನೀಡು ದವಸಧಾನ್ಯವ**
**ಎಂದಿಗೂ ಯೋಚಿಸದಿರು ಮತ ಲಿಂಗಗಳ ತಾರತಮ್ಯವ**
**ಪ್ರಾಮಾಣಿಕತೆ, ನಿಷ್ಠೆಯಿಂದ ಪಾಲಿಸು ನಿನ್ನ ಕರ್ತವ್ಯವ**
**ಸದ್ಗುಣಯೋಗಿ ನೀ ನಡೆಸು ಸರಳ ಜೀವನವ**
**ಶಿವ ತಾನಾಗಿ ಮೆಚ್ಚುವ...**

**ಪರಾಮರ್ಶನ ಗ್ರಂಥಗಳು:**

1. ನಾರಾಯಣ ಪಿ.ವಿ., (1990), ವಚನ ನಿರ್ವಚನ, ಪುಸ್ತಕಾಲಯ, ಮೈಸೂರು.
2. ಮುಗಳಿ ರಂ.ಶ್ರೀ. (2014), ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.